ಆ) ಹಾಗಿದ್ದಲ್ಲಿ, ಈ ಡಿ. ದರ್ಜೆ ನೌಕರರ ಹುದ್ದೆಗಳನ್ನು ತುಂಬಲು ಯಾವ ಕ್ರಮವನ್ನು ಕೈಗೊಳ್ಳಗಾಗಿದೆ.

ಇ) ತಾತ್ಕಾಲಿಕವಾಗಿ ದಿನಗೂಲಿ ಆಧಾರದ ಮೇಲೆ ಡಿ. ದರ್ಜೆ ನೌಕರರನ್ನು ನೇಮಕ ಮಾಡಲಾಗುವುದೇ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಜಿಲ್ಲಾ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಗ್ರೂಪ್-ಡಿ ವೃಂದದ ಸೇವೆಯನ್ನು ಬಾಹ್ಯ ಮೂಲಗಳಿಂದ ಪಡೆದು ಸ್ವಚ್ಛತೆ ಕಾರ್ಯವನ್ನು ನಿರ್ವಹಿಸಿ ಜನಸಾಮಾನ್ಯರಿಗೆ ತೊಂದರೆ ಆಗದಂತೆ ಕ್ರಮ ವಹಿಸಲಾಗಿದೆ.

ಆ) ಗ್ರೂಪ್-ಡಿ ವೃಂದದ ಸಿಬ್ಬಂದಿಯ ನೇರ ನೇಮಕಾತಿಗೆ ನಿರ್ಬಂಧವಿರುವುದರಿಂದ, ಈ ಸೇವೆಗಳನ್ನು ಬಾಹ್ಯ ಮೂಲದಿಂದ ಪಡೆದುಕೊಳ್ಳುವ ಅವಕಾಶವನ್ನು ಕಲ್ಪಿಸಲಾಗಿದೆ.

ಇ) ಇಲ್ಲ.

ಅಕ್ಕಿ ಗಿರಣಿಗಳಿಂದ ಲೆವಿ ಅಕ್ಕಿ ಸಂಗ್ರಹಿಸುತ್ತಿರುವುದು

530 (1110) ಶ್ರೀ ಖಾದರ್ ಯು.ಟಿ. (ಮಂಗಳೂರು) :- ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ರಾಜ್ಯದಲ್ಲಿರುವ ಅಕ್ಕಿ ಗಿರಣಿ ಮಾಲೀಕರಿಂದ ಎಷ್ಟು ಪ್ರಮಾಣದ ಲೆವಿ ಅಕ್ಕಿ ವಸೂಲಿ ಮಾಡಲು ಸರ್ಕಾರ ಆದೇಶಿಸಿದೆ.

ಆ) ಜಿಲ್ಲಾವಾರು ಇದುವರೆವಿಗೂ ಸಂಗ್ರಹಿಸಿರುವ ಲೆವಿ ಅಕ್ಕಿಯ ಪ್ರಮಾಣ ಎಷ್ಟು?

ಇ) ರಾಜ್ಯದಲ್ಲಿ ಇರುವ ಅಕ್ಕಿ ಗಿರಣಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)?

ಶ್ರೀ ಆರ್. ಅಶೋಕ್ (ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :-

ಅ) ರಾಜ್ಯದಲ್ಲಿ 2.00 ಲಕ್ಷ ಮೆ. ಟನ್ ಪ್ರಮಾಣದ ಅಕ್ಕಿ ವಸೂಲಿ ಮಾಡಲು ಕೇಂದ್ರ ಸರ್ಕಾರ ಆದೇಶಿಸಿದೆ.

ಆ) ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಮಾಹಿತಿ ಒದಗಿಸಲಾಗಿದೆ.

ಇ) ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಮಾಹಿತಿ ಒದಗಿಸಲಾಗಿದೆ.

ಅನುಬಂಧ

ಕ್ರ.ಸಂ.	ಜಿಲ್ಲೆಯ ಹೆಸರು	28-06-2010ರ ಅಂತ್ಯಕ್ಕೆ ಸಂಗ್ರಹಿಸಿರುವ ಲೆವಿ ಅಕ್ಕಿಯ ಪ್ರಮಾಣ (ಮೆ.ಟನ್ ಗಳಲ್ಲಿ)	ರೈಸ್ ಮಿಲ್‌ಗಳ ಸಂಖ್ಯೆ
1	ಬಾಗಲಕೋಟೆ	0	0
2	ಬೆಂಗಳೂರು (ಗ್ರಾಮಾಂತರ)	962.5	5
3	ಬೆಂಗಳೂರು (ನಗರ)	404.6	2
4	ಬಳ್ಳಾರಿ	7047	105
5	ಬೆಳಗಾಂ	522	19
6	ಬೀದರ್	166.5	5
7	ಬಿಜಾಪೂರ	0	0
8	ಚಾಮರಾಜನಗರ	762.5	12
9	ಚಿಕ್ಕಮಗಳೂರು	134.5	75

10	ಚಿಕ್ಕಬಳ್ಳಾಪುರ	200	28
11	ಚಿತ್ರದುರ್ಗ	375	15
12	ದಾವಣಗೆರೆ	2024	128
13	ಧಾರವಾಡ	112.5	8
14	ದಕ್ಷಿಣ ಕನ್ನಡ	764	10
15	ಗದಗ	0	0
16	ಗುಲ್ಬರ್ಗ	0	1
17	ಹಾಸನ	3679	133
18	ಹಾವೇರಿ	600	31
19	ಕೋಲಾರ	687.5	15
20	ಕೊಡಗು	225	28
21	ಕೊಪ್ಪಳ	6707	84
22	ಮಂಡ್ಯ	8962	244
23	ಮೈಸೂರು	7248.5	216
24	ರಾಯಚೂರು	11483	102
25	ರಾಮನಗರ	225	19
26	ಶಿವಮೊಗ್ಗ	6506.1	73
27	ತುಮಕೂರು	3300	144
28	ಉತ್ತರ ಕನ್ನಡ	437.5	97
29	ಉಡುಪಿ	902	34
30	ಯಾದಗಿರಿ	383	26
	ಒಟ್ಟು	**64820.7**	**1659**